# ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ದಿನಾಂಕ 15-12-2017ರ ಶುಕ್ರವಾರ ದಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ಸಿ.ಬಸವರಾಜು | – | ಕುಲಪತಿಗಳು (ಪ್ರಭಾರ) ಹಾಗೂ ಅಧ್ಯಕ್ಷರು |
| 2. ಡಾ. ನಿಂಗಮ್ಮ ಸಿ.ಬೆಟ್ಸೂರ್ | – | ಸದಸ್ಯರು |
| 3. ಶ್ರೀಮತಿ ಸಹನಾ ಶಿವಪ್ಪ, | – | ಸದಸ್ಯರು |
| 4. ಶ್ರೀ ಜಗದೀಶ್ ಎಲ್, | – | ಸದಸ್ಯರು |
| 5. ಶ್ರೀ ಕಾಳೇಗೌಡ ಕೆ.ಎಂ. | – | ಸದಸ್ಯರು |
| 6. ಪ್ರೊ. ಎಸ್.ಎಲ್. ಸುರೇಶ್ | – | ಸದಸ್ಯರು |
| 7. ಶ್ರೀಮತಿ ಎಂ.ಎನ್. ಪೊನ್ನಮ್ಮ | – | ಸದಸ್ಯರು |
| 8. ಡಾ. ಎ.ಟಿ. ಶಿವರಾಮು | – | ಸದಸ್ಯರು |
| 9. ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 10. ಶ್ರೀ ಲಯನ್ ಹೆಚ್. ರಮೇಶ್, | – | ಸದಸ್ಯರು |
| 11. ಶ್ರೀ ಮಹಮದ್‌ಅಬ್ದುಸ್ಸಲಾಂ | – | ಸದಸ್ಯರು |
| 12. ಶ್ರೀಮತಿ ಶೃತಿತರುಣ್‌ಗಿರಿ | – | ಸದಸ್ಯರು |
| 13. ಶ್ರೀ ಕುಮಾರ್ | – | ಸದಸ್ಯರು |
| 14. ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 15. ಪ್ರೊ. ಜೆ. ಸೋಮಶೇಖರ್ | – | ಸದಸ್ಯರು |
| ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 16. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಎಂಟನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ತುಂಬು ಹೃದಯದಿಂದ ಸ್ವಾಗತಿಸಿದರು ಮತ್ತು ತಾವು ಈ ಸದಸ್ಯ ಕಾರ್ಯದರ್ಶಿಯಾಗಿ ಮತ್ತು ಸದಸ್ಯನಾಗಿ ಕಾರ್ಯನಿರ್ವಹಿಸಿದ್ದೇನೆ. ಆದರೆ ಅಧ್ಯಕ್ಷನಾಗಿ ತಮಗೆ ಇದು ಪ್ರಥಮ ಸಭೆಯಾಗಿದ್ದು ತಾವೆಲ್ಲರೂ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಸಹಕರಿಸಬೇಕೆಂದು ಕೋರುತ್ತಾ ತಮ್ಮನ್ನು ಪ್ರಭಾರ ಕುಲಪತಿಗಳಾಗಿ ನೇಮಕ ಮಾಡಿರುವ ಘನತೆವೆತ್ತ ಕುಲಾಧಿಪತಿಗಳು ಹಾಗೂ ಸರ್ಕಾರಕ್ಕೆ ಕೃತಜ್ಞತೆಗಳನ್ನು ಈ ಸಿಂಡಿಕೇಟ್ ಸಭೆಯ ಮೂಲಕ ಸಲ್ಲಿಸ ಬಯಸುತ್ತೇನೆ ಎಂದು ತಿಳಿಸಿದರು.

ಮುಂದುವರೆದು ಹೊಸದಾಗಿ ಸಿಂಡಿಕೇಟ್‌ಗೆ ನಾಮನಿರ್ದೇಶನಗೊಂಡಿರುವ ಪ್ರೊ. ಎಸ್.ಎಲ್.ಸುರೇಶ್, ಪ್ರಾಂಶುಪಾಲರು, ಭಾರತಿ ಶಿಕ್ಷಣ ಕಾಲೇಜು, ಕೆ.ಎಂ.ದೊಡ್ಡಿ ಮತ್ತು ಡಾ.ಎ.ಟಿ.ಶಿವರಾಮು, ಪ್ರಾಂಶುಪಾಲರು, ಜಿ.ಜಿ.ಎಸ್. ಶಿಕ್ಷಣ ಕಾಲೇಜು, ನಾಗಮಂಗಲ ಇವರನ್ನು ಸಭೆಯಲ್ಲಿ ಪರಸ್ಪರ ಎಲ್ಲಾ ಸದಸ್ಯರುಗಳಿಗೆ ಪರಿಚಯಿಸಿ ಅವರನ್ನು ಸಹ ಸ್ವಾಗತಿಸಿದರು.

ಮತ್ತು ಇದುವರೆಗೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ದಯಾನಂದ ಮಾನೆ ಅವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು ಹಾಗೂ ಸಿಂಡಿಕೇಟ್ ಸದಸ್ಯರಾಗಿ ನಿರ್ಗಮಿಸಿರುವ ಶ್ರೀ ಎಂ.ಪಿ.ಪುಷ್ಪಕುಮಾರ್, ಪ್ರಾಂಶುಪಾಲರು, ಬಿಳಿಗಿರಿ ಪ್ರಥಮ ದರ್ಜೆ ಕಾಲೇಜು, ಯಳಂದೂರು ಮತ್ತು ಡಾ. ಎಂ.ಸಿ.ನಟರಾಜ, ಪ್ರಾಂಶುಪಾಲರು, ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ, ಸುತ್ತೂರು ಅವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಆನಂತರ ಕುಲಸಚಿವರು ಮಾತನಾಡಿ ಅಪಾರವಾದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಅನುಭವವಿರುವ ಕಾನೂನು ನಿಕಾಯದ ಡೀನರಾದ ಪ್ರೊ.ಸಿ.ಬಸವರಾಜು ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಅವರನ್ನು ಸಿಂಡಿಕೇಟ್ ಸದಸ್ಯರೆಲ್ಲರ ಪರವಾಗಿ ಸಭೆಗೆ ಸ್ವಾಗತಿಸಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| ವಿಷಯ ಸಂಖ್ಯೆ: I | ದಿನಾಂಕ 27-10-2017ರಂದು ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| | ದಿನಾಂಕ 27-10-2017ರ ನಡಾವಳಿಯ ವಿಷಯ ಸಂಖ್ಯೆ 10.9ಕ್ಕೆ ಸಂಬಂಧಿಸಿದಂತೆ ಮಹಾರಾಜ ಕಾಲೇಜಿನಲ್ಲಿ ಕಳೆದ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಅಂತಾರಾಷ್ಟ್ರೀಯ ಸಂಬಂಧಗಳು (International relations) ಎಂಬ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗವನ್ನು ಪ್ರಾರಂಭಿಸಲಾಗಿದ್ದು ಇಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲವಾಗುವಂತೆ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ School of International relations ಇವರೊಡನೆ ಒಡಂಬಡಿಕೆ ಮಾಡಿಕೊಳ್ಳುವ ಇಂತಹ ಉಪಯುಕ್ತ ಪ್ರಸ್ತಾವನೆಯನ್ನು ಕೈಬಿಟ್ಟಿರುವುದಕ್ಕೆ ಸಿಂಡಿಕೇಟ್ ಸದಸ್ಯರಾದ ಮಹಮದ್‌ಅಬ್ದುಸ್ಸಲಾಂ ಅವರು ಆಕ್ಷೇಪ ವ್ಯಕ್ತಪಡಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ ಕಳೆದ ವರ್ಷ ಈ ವಿಷಯವನ್ನು ಪ್ರಾರಂಭಿಸಿದಾಗ ಇದೇ ಕ್ಷೇತ್ರದಲ್ಲಿ ನುರಿತ ಪರಿಣಿತರೊಬ್ಬರನ್ನು ನೇಮಕಮಾಡಿಕೊಳ್ಳಲು ಪ್ರಯತ್ನಿಸಲಾಗಿತ್ತು. ಆದರೆ ತಕ್ಷಣಕ್ಕೆ ಯಾರೂ ಸಿಗದ ಕಾರಣ ರಾಜ್ಯಶಾಸ್ತ್ರ ವಿಭಾಗದಲ್ಲಿನ ಅಧ್ಯಾಪಕರನ್ನು ಈ ವಿಭಾಗಕ್ಕೆ ನಿಯೋಜಿಸಲಾಗಿದೆ. ಇಂತಹ ಒಂದು ಪ್ರಮುಖ ವಿಷಯಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕವಾಗಿ ಉತ್ಕೃಷ್ಟತೆಯನ್ನು ಹೊಂದಿರುವ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದೊಡನೆ ಏಕಾಏಕಿ ಒಡಂಬಡಿಕೆ ಮಾಡಿಕೊಳ್ಳುವುದು ಅಷ್ಟು ಉಚಿತವಾಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತರೆ ವಿಭಾಗಗಳು ವಿದೇಶದಲ್ಲಿನ ವಿಶ್ವವಿದ್ಯಾನಿಲಯಗಳೊಡನೆ ಒಡಂಬಡಿಕೆ ಮಾಡಿಕೊಂಡಿರುವ ಅನೇಕ ಉದಾಹರಣೆಗಳಿವೆ. ಈ ವಿಭಾಗಕ್ಕೆ ಹಿರಿಯ ಹಾಗೂ ಅನುಭವಿ ಪ್ರಾಧ್ಯಾಪಕರು ಲಭ್ಯವಾದ ನಂತರ ಮತ್ತು ವಿಭಾಗಕ್ಕೆ ಮೂಲಸೌಲಭ್ಯಗಳನ್ನು ಒದಗಿಸಿದ ನಂತರ ಈ ಬಗ್ಗೆ ಕ್ರಮವಹಿಸಲಾಗುವುದೆಂದು ಸಿಂಡಿಕೇಟ್ ತೀರ್ಮಾನಿಸಿತು.<br>ದಿನಾಂಕ 27-10-2017ರ ನಡಾವಳಿಯ ವಿಷಯ ಸಂಖ್ಯೆ 10.61ಕ್ಕೆ ಸಂಬಂಧಿಸಿದಂತೆ ಡಾ. ಎಸ್.ಶ್ರೀಕಂಠಸ್ವಾಮಿ, ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು ಇವರನ್ನು ಅವರ ಮಾತೃ ಸಂಸ್ಥೆ ಯುವರಾಜ ಕಾಲೇಜಿಗೆ ವರ್ಗಾಯಿಸಿದಲ್ಲಿ ಅವರು ಪರಿಸರ ಅಧ್ಯಯನ ವಿಭಾಗದಲ್ಲಿ ಕೈಗೊಂಡಿರುವ ಯೋಜನೆಗಳು ಅಪೂರ್ಣವಾಗುತ್ತವೆ. ಆದ್ದರಿಂದ ಅವರಿಗೆ 06 ತಿಂಗಳುಗಳೊಳಗೆ ಪೂರ್ಣಗೊಳಿಸಬೇಕು. ಒಂದು ವೇಳೆ 6 ತಿಂಗಳೊಳಗೆ ಪೂರ್ಣಗೊಳಿಸದಿದ್ದರೆ ಕಡ್ಡಾಯವಾಗಿ ಅವರನ್ನು ಮಾತೃ ಸಂಸ್ಥೆ ಯುವರಾಜ ಕಾಲೇಜಿಗೆ ಕಳುಹಿಸುವುದು ಉಚಿತವೆಂದು ಸಿಂಡಿಕೇಟ್ ಅಭಿಪ್ರಾಯಿಸಿತು. |
| ತೀರ್ಮಾನ | ಮೇಲಿನ ತಿದ್ದುಪಡಿಯೊಂದಿಗೆ ದಿನಾಂಕ 27-10-2017ರಂದು ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |

| | |
|---|---|
| ವಿಷಯ ಸಂಖ್ಯೆ: II | ದಿನಾಂಕ 27-10-2017ರಂದು ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| ತೀರ್ಮಾನ | ಗಮನಿಸಲಾಯಿತು. |
| ವಿಷಯ ಸಂಖ್ಯೆ: III | ದಿನಾಂಕ 14-11-2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ದೃಢೀಕರಿಸಲಾಯಿತು. |
| ವಿಷಯ ಸಂಖ್ಯೆ: IV | ದಿನಾಂಕ 14-11-2017ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| ತೀರ್ಮಾನ | ಗಮನಿಸಲಾಯಿತು. |
| **2017/12.1** | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹ ಹಂಚಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಸಿದ್ಧಪಡಿಸಲು ರಚಿಸಿರುವ ಸಮಿತಿ ಸಭೆಯ ನಡಾವಳಿಗೆ ಸಿಂಡಿಕೇಟ್ ಸಭೆಯಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳನ್ನು ವರ್ಗೀಕರಿಸಿ ಅವುಗಳನ್ನು ಹಂಚಿಕೆ ಮಾಡಲು ಚಾಲ್ತಿಯಲ್ಲಿರುವ ನಿಯಮಗಳಿಗೆ ಪೂರಕವಾಗಿ ಹಂಚಿಕೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಸಿದ್ಧಪಡಿಸಲು ರಚಿಸಲಾಗಿದ್ದ ಸಮಿತಿಯು ಸಿದ್ಧಪಡಿಸಿರುವ ಮಾರ್ಗಸೂಚಿಯನ್ನು ಸಿಂಡಿಕೇಟ್ ಅನುಮೋದಿಸಿತಲ್ಲದೇ ಸ್ವಂತ ಮನೆ ಹೊಂದಿದ್ದಾಗ್ಯೂ ಅವಶ್ಯಕ ಸೇವೆಗಳಡಿಯಲ್ಲಿ ಅಧಿಕಾರಿಗಳ ಬಳಿ ಕೆಲಸ ನಿರ್ವಹಿಸುವ ಉದ್ಯೋಗಿಗಳ ವಾಸಸ್ಥಳವು ದೂರವಿದ್ದಲ್ಲಿ ಅಂತಹವರಿಗೆ ವಸತಿಗೃಹ ಹಂಚಿಕೆ ಮಾಡಿಕೊಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.2** | ವಿಶ್ವವಿದ್ಯಾನಿಲಯದ 98ನೇ ವಾರ್ಷಿಕಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳ ಹಾಗೂ ಮುಖ್ಯ ಅತಿಥಿಗಳನ್ನು ನಿಗದಿಪಡಿಸುವ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ 98ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವನ್ನು 2018ನೇ ಜನವರಿ 3ನೇ ವಾರದಲ್ಲಿ ಏರ್ಪಡಿಸಲು ಹಾಗೂ ಈ ಸಂಬಂಧ ದಿನಾಂಕ, ಸಮಯ, ಸ್ಥಳ ಹಾಗೂ ಶ್ರೇಷ್ಠ ಪಂಡಿತ(Eminent Scholar)ರೊಬ್ಬರನ್ನು ಮುಖ್ಯ ಅತಿಥಿಗಳಾಗಿ ನಿಗದಿಪಡಿಸುವ ಕುರಿತು ಘನತೆವೆತ್ತ ಕುಲಾಧಿಪತಿಗಳ ಅನುಮತಿ ಪಡೆಯುವ ಸಲುವಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.3** | 2018-19ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣಕ್ಕಾಗಿ ಹಾಗೂ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮದರ್ಜೆ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವಕುರಿತು. |
| | 2018-19ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವಾಗಿ ಸಿಂಡಿಕೇಟ್ ಸದಸ್ಯರುಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಬೇಕೆಂದು ಎಲ್ಲಾ ಸಿಂಡಿಕೇಟ್ ಸದಸ್ಯರುಕೋರಿದರು. ಮಾನ್ಯ ಕುಲಸಚಿವರು ಸರ್ಕಾರದಿಂದ ನಿರ್ದೇಶನವಿದ್ದುದರಿಂದ ಇಂತಹ ಸಮಿತಿಗಳನ್ನು ರಚಿಸುವಾಗ ಸಿಂಡಿಕೇಟ್ ಸದಸ್ಯರುಗಳನ್ನು ಕೈಬಿಡಲಾಗಿದೆಯೆಂದು ತಿಳಿಸಿದರು. ಮಾನ್ಯ ಕುಲಪತಿಗಳು ಮತ್ತೊಮ್ಮೆ ಪರಿಶೀಲಿಸಿ ನಿಯಮಾನುಸಾರ ಅವಕಾಶವಿದ್ದಲ್ಲಿ ಸಿಂಡಿಕೇಟ್ ಸದಸ್ಯರು, ಆಯಾ ನಿಕಾಯದ ಡೀನರು, ಹಿರಿಯ ಪ್ರಾಧ್ಯಾಪಕರುಗಳನ್ನೊಳಗೊಂಡಂತೆ ಸಮಿತಿ ರಚಿಸಲಾಗುವುದೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | 2018-19ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣಕ್ಕಾಗಿ ಹಾಗೂ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ನಿಯಮಾಸಾರ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/12.4** | ಯು.ಜಿ. ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಯು.ಜಿ.ಸಿ. ಅಧ್ಯಾಪಕರುಗಳಿಗೆ ದಿನಭತ್ಯೆಯನ್ನು ಹೆಚ್ಚಿಸುವ ಬಗ್ಗೆ. |
| **ತೀರ್ಮಾನ** | ಉತ್ತರ ಪತ್ರಿಕೆಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವ ಹಾಗೂ ವಾಸ್ತವ ವೆಚ್ಚಗಳನ್ನು ಸರಿದೂಗಿಸುವ ಸದುದ್ದೇಶದಿಂದ ಮತ್ತು ಈ ಬಾರಿ ಮೌಲ್ಯಮಾಪನಕ್ಕೆ ಹಾಜರಾಗಿರುವವರಿಗೂ ಅನ್ವಯವಾಗುವಂತೆ, ಯು.ಜಿ.ಸಿ. ವೇತನ ಪಡೆಯುವ ಹೊರಗಿನ ಅಧ್ಯಾಪಕರುಗಳಿಗೆ ದಿನಭತ್ಯೆಯನ್ನು ರೂ. 800/–ಗಳಿಗೆ ಹಾಗೂ ಸ್ಥಳೀಯರಿಗೆ ರೂ. 400/–ಗಳಿಗೆ ನಿಗಧಿಪಡಿಸಿ ಆದೇಶ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.5** | ಮೈಸೂರು ವಿಶ್ವವಿದ್ಯಾನಿಲಯದ ಆದಾಯ ತೆರಿಗೆ ಸಲಹೆಗಾರರು ಸಲ್ಲಿಸಿರುವ "Comprehensive Review of the Income Tax Compliance Requirements" of the University of Mysore ವರದಿಯನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಆದಾಯ ತೆರಿಗೆ ಸಮಾಲೋಚಕರು ಸಲ್ಲಿಸಿರುವ "Comprehensive Review of the Income Tax Compliance Requirements" of the University of Mysore ವರದಿಯನ್ನು ಅನುಮೋದಿಸಲಾಯಿತು ಮತ್ತು ಆದಾಯ ತೆರಿಗೆಗೆ ಸಂಬಂಧಿಸಿದಂತೆ ವೃತ್ತಿಶುಲ್ಕ ಪಾವತಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/12.6** | ಶ್ರೀ ರಂಗಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಮತ್ತು ಶ್ರೀ ಮನು. ಸಿ, ತಾತ್ಕಾಲಿಕ ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರುಗಳ ವಿರುದ್ಧ ಸಿಸಿಎ ಅಧಿನಿಯಮನುಸಾರ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ರಂಗಸ್ವಾಮಿ, ದ್ವಿತೀಯ ದರ್ಜೆ ಗುಮಾಸ್ತರು ಮತ್ತು ಶ್ರೀ ಮನು. ಸಿ, ತಾತ್ಕಾಲಿಕ ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರುಗಳು ವಿಶ್ವವಿದ್ಯಾನಿಲಯಕ್ಕೆ ಉಂಟಾಗಿರುವ ನಷ್ಟವನ್ನು ತುಂಬಿ ಕೊಡುವುದಾದಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸುವುದು, ಇಲ್ಲದಿದ್ದ ಪಕ್ಷದಲ್ಲಿ ಉದ್ಯೋಗಿಗಳ ವಿರುದ್ಧ ಸಿಸಿಎ ಅಧಿನಿಯಮನುಸಾರ ಶಿಸ್ತು ಕ್ರಮ ಜರುಗಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.7** | ಎಂ.ಎ. ಇನ್‌ಥಿಯಾಲಜಿ (ಸ್ನಾತಕೋತ್ತರ) ಅಧ್ಯಯನ ಮಂಡಳಿಯನ್ನು ಪುನರ್ ರಚಿಸಿರುವ ಬಗ್ಗೆ – ಅನುಸಮರ್ಥನೆಗಾಗಿ |
| **ತೀರ್ಮಾನ** | ಅನುಸಮರ್ಥಿಸಲಾಯಿತು. |
| **2017/12.8** | ಕ್ರಿಶ್ಚಿಯಾನಿಟಿ ಮತ್ತು ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವ ಬಗ್ಗೆ. |
| **ತೀರ್ಮಾನ** | ಕ್ರಿಶ್ಚಿಯಾನಿಟಿ ಮತ್ತು ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗಗಳಲ್ಲಿ ಒಬ್ಬೊಬ್ಬರೇ ಖಾಯಂ ಸಹಾಯಕ ಪ್ರಾಧ್ಯಾಪಕರಿರುವುದರಿಂದ ವಿಭಾಗಗಳ ಶೈಕ್ಷಣಿಕ ಹಿತದೃಷ್ಟಿಯಿಂದಇತರೆ ವಿಭಾಗಗಳ ಹಿರಿಯ ಪ್ರಾಧ್ಯಾಪಕರೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.9** | ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಹಮ್ಮಿಕೊಳ್ಳಲು ಉದ್ದೇಶಿಸಿರುವ ಕಾರ್ಯಚಟುವಟಿಕೆಗಳಿಗೆ ರೂ.3.00 ಕೋಟಿಗಳ ಅನುದಾನ ಬಿಡುಗಡೆ ಮಾಡಿರುವ ಬಗೆಗೆ. |
| **ತೀರ್ಮಾನ** | ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯಸರ್ಕಾರವು ವಿಶೇಷ ಸಂದರ್ಭವೆಂದು ಪರಿಗಣಿಸಿ ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಹಮ್ಮಿಕೊಂಡಿರುವ ಉದ್ದೇಶಿತ ಕಾರ್ಯಚಟುವಟಿಕೆಗಳ ಪ್ರಸ್ತಾವನೆ ಮತ್ತು ಅಂದಾಜುವೆಚ್ಚಗಳಿಗೆ ರೂ.3.00 ಕೋಟಿಗಳ ಅನುದಾನ ಮಂಜೂರು ಮಾಡಿರುವುದಕ್ಕೆ ಕಾರಣರಾದ ಸನ್ಮಾನ್ಯ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಸಚಿವರುಗಳಿಗೆ ಕೃತಜ್ಞತೆ ವ್ಯಕ್ತಪಡಿಸಿದ ಸಭೆಯು ಮಂಜೂರಾದ ಹಣವನ್ನು ನಿಯಮಾನುಸಾರ ವಿನಿಯೋಗಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/12.10** | ಮಾನಸಗಂಗೋತ್ರಿಯಲ್ಲಿರುವ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಎದುರಿನಲ್ಲಿ ಶ್ರೀ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಕೋರಿರುವ ಬಗ್ಗೆ. |
| **ತೀರ್ಮಾನ** | ಮಾನಸಗಂಗೋತ್ರಿಯ ಆವರಣದಲ್ಲಿ ಸಮಾಜ ಸುಧಾರಕರಾದ ಶ್ರೀ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸುವ ಸಂಬಂಧ ಸರ್ಕಾರದ ಅನುಮೋದನೆ ಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/12.11** | ಆನ್‌ಲೈನ್ ಮೌಲ್ಯಮಾಪನದಿಂದಾಗುತ್ತಿರುವ ವಿಳಂಬದ ಬಗ್ಗೆ. |
| ತೀರ್ಮಾನ | ಸುದೀರ್ಘವಾದ ಚರ್ಚೆಯ ನಂತರ, ಆನ್‌ಲೈನ್‌ನಲ್ಲಿ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ವ್ಯವಸ್ಥೆಯು ಉತ್ತಮ ಪದ್ಧತಿಯಾಗಿದ್ದು . ಈ ಪದ್ಧತಿಯ ಮೌಲ್ಯಮಾಪನ ಕಾರ್ಯವು ಪಾರದರ್ಶಕತೆಯಿಂದ ಕೂಡಿರುವುದಾಗಿರುತ್ತದೆಯೆಂದು ಅಭಿಪ್ರಾಯಿಸಿದ ಸಿಂಡಿಕೇಟ್, ಮಾನ್ಯ ಕುಲಪತಿಗಳಿಗೆ ಒಂದು ಸಮಿತಿ ರಚಿಸುವ ಅಧಿಕಾರವನ್ನು ನೀಡಿಕೂಡಲೇ ಸಭೆ ಸೇರಿ ಸಕಾಲದಲ್ಲಿ ಫಲಿತಾಂಶ ನೀಡಲು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಕುರಿತು ಒಂದು ವರದಿ ಪಡೆದು ಮುಂದಿನ ಸಭೆಗೆ ಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.12** | ಔಟ್‌ರೀಚ್ ಕೇಂದ್ರಗಳ ಅಂಕಪಟ್ಟಿಗಳಿಗೆ Mode of Study ಮುದ್ರಿಸುವ ಬಗ್ಗೆ. |
| ತೀರ್ಮಾನ | 2017–18ನೇ ಶೈಕ್ಷಣಿಕ ಸಾಲಿನಿಂದ ಮತ್ತು ಪ್ರಥಮ ಸೆಮಿಸ್ಟರ್‌ನಿಂದ ಔಟ್‌ರೀಚ್ ಕೇಂದ್ರಗಳ ಎಲ್ಲಾ ಪದವಿಗಳ ಅಂಕಪಟ್ಟಿಗಳಿಗೆ ವ್ಯಾಸಂಗ ಪದ್ಧತಿ[Mode of Study]ಯನ್ನು ಮುದ್ರಿಸಲು ಸಿಂಡಿಕೇಟ್ ಅನುಮೋದಿಸಿತು. |
| **2017/12.13** | Proposal of Norms of expenditure-2017 |
| ತೀರ್ಮಾನ | The Syndicate decided to enhance the remuneration and refreshment charges of Nodal officers of KSET examination as proposed in the Subject. |
| **2017/12.14** | ಹುತಾತ್ಮ ಸೈನಿಕರ ಗೌರವಾರ್ಥವಾಗಿ ಅವರ ಕುಟುಂಬದ ಹೆಣ್ಣು ಮಕ್ಕಳಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಕೋರ್ಸಿನಿಂದ ಪಿಹೆಚ್.ಡಿ. ಹಂತದವರೆಗೆ ಉಚಿತ ಶಿಕ್ಷಣ, ವಸತಿ ಮತ್ತುಊಟದ ವ್ಯವಸ್ಥೆ ಸೌಲಭ್ಯ ನೀಡುವ ಬಗ್ಗೆ. |
| ತೀರ್ಮಾನ | "ಕಾಶ್ಮೀರದ ಊರಿ" ಎಂಬ ಸ್ಥಳದಲ್ಲಿ ಹುತಾತ್ಮರಾದ ಕರ್ನಾಟಕ ರಾಜ್ಯದ ಸೈನಿಕರ ಕುಟುಂಬದ ಮಕ್ಕಳಿಗೆ ಉಚಿತ ಶಿಕ್ಷಣ, ಉಚಿತ ಊಟದ ವ್ಯವಸ್ಥೆ ಮತ್ತು ಉಚಿತ ವಸತಿಯೊಂದಿಗೆ ಪದವಿ ಕೋರ್ಸಿನಿಂದ ಪಿಹೆಚ್.ಡಿ.ಯವರೆಗೆ ಪ್ರವೇಶ ನೀಡಲು, ಹಾಗೂ ರಾಷ್ಟ್ರದ ಇತರೆ ಗಡಿಭಾಗಗಳಲ್ಲಿ ಹುತಾತ್ಮರಾದ ಕರ್ನಾಟಕ ರಾಜ್ಯದ ಸೈನಿಕರ ಕುಟುಂಬದ ಮಕ್ಕಳು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಮತ್ತು ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದಲ್ಲಿ ಇದೇ ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ವತಿಯಿಂದ ವಿಸ್ತರಿಸಲು ಹಾಗೂ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾದ ಶುಲ್ಕಕ್ಕೆ ವಿನಾಯಿತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.15** | ವಿದೇಶಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಘಟಿಕೋತ್ಸವನ್ನು ಏರ್ಪಡಿಸುವ ಬಗ್ಗೆ. |
| ತೀರ್ಮಾನ | ಎಲ್ಲಾ ವಿದೇಶಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲು ಪ್ರತ್ಯೇಕ ಘಟಿಕೋತ್ಸವವನ್ನು ಏರ್ಪಡಿಸುವ ಸಂಬಂಧ ಮೂರು ಜನ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ವರದಿ ಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.16** | ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವ್ಯವಸ್ಥೆಗೆ ಸಂಬಂಧಿಸಿದಂತೆ ಹಣಕಾಸಿನ ನಿರ್ವಹಣೆಯನ್ನು ಕುರಿತು. |
| ತೀರ್ಮಾನ | ಮುಂದಿನ ಚಾತುರ್ಮಾಸದ ಅವಧಿಯಿಂದ ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಯಲಿರುವ ಮೆಸ್ ವ್ಯವಸ್ಥೆಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರವನ್ನು ನಿರ್ವಹಿಸಲು ದಿನಾಂಕ 23-10-2017ರಂದು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ಶಿಫಾರಸ್ಸು ಮಾಡಿರುವ ಅಂಶಗಳನ್ನು ಜಾರಿಗೆ ತರಲು ಸಿಂಡಿಕೇಟ್ ಅನುಮೋದಿಸಿತು. |
| **2017/12.17** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಚಿಸಿರುವ "STATUTES RELATING TO DIRECT RECRUITMENT AND CAREER ADVANCEMENT SCHEME AND MISCELLANEOUS PROVISIONS TO IMPLEMENT THE UGC PAY SCALES REVISED FROM 1.1.2006 TO TEACHERS, LIBRARIAN AND PHYSICAL EDUCATION DIRECTORS AND OTHER ALLIED POSTS OF UNIVERSITY OF MYSORE" ಎಂಬ ಕರಡು ಅಧಿನಿಯಮವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| ತೀರ್ಮಾನ | ದಿನಾಂಕ 11-12-2017ರಂದು ನಡೆದ ಸ್ಟ್ಯಾಚ್ಯೂಟ್ ಕಮಿಟಿಯು ಶಿಫಾರಸ್ಸು ಮಾಡಿರುವ ಕೆಲವು ಅಂಶಗಳನ್ನು ಸೇರ್ಪಡೆ ಮಾಡಿಕೊಂಡು ಕರಡು ಅಧಿನಿಯಮಕ್ಕೆ ಘನತೆವೆತ್ತ ಕುಲಾಧಿಪತಿಗಳ ಅಂಕಿತ ಪಡೆಯಲು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2017/12.18** | ಮಾರ್ಗದರ್ಶಕರ ಮಾನ್ಯತೆ ಹಿಂಪಡೆದಿರುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಪತ್ರ ಹಾಗೂ ಪಿಎಚ್.ಡಿ. ನಿಯಮಗಳೊಂದಿಗೆ ವಿಷಯವನ್ನು ಮರುಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.19** | ಡಾ. ಖೈಸರ್‌ಜಹಾನ್ ಬೇಗಂ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಸೌದಿ ಅರೇಬಿಯಾದಲ್ಲಿನ ಮೆಕ್ಕಾ ಮತ್ತು ಮದೀನಾಗಳಿಗೆ ಯಾತ್ರೆಯನ್ನು ಕೈಗೊಳ್ಳಲು ಅನುಮತಿ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಖೈಸರ್‌ಜಹಾನ್ ಬೇಗಂ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ವಿಶ್ವವಿದ್ಯಾನಿಲಯದ ಮೇಲೆ ಯಾವ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಹಾಗೂ ಮಧ್ಯಂತರ ಬಿಡುವಿನ ರಜಾ ದಿನಗಳಲ್ಲಿ ಹಾಗೂ ಅವರು ಈಗಾಗಲೇ ಮೆಡಿಕಲ್ ರಜೆಯ ಮೇಲಿರುವುದರಿಂದ, ದಿನಾಂಕ 27-11-2017ರಿಂದ 11-12-2017ರವರೆಗೆ ಸೌದಿ ಅರೇಬಿಯಾದಲ್ಲಿನ ಮೆಕ್ಕಾ ಮತ್ತು ಮದೀನಾಗಳಿಗೆ ಪವಿತ್ರಾ ಯಾತ್ರೆಯನ್ನು ಕೈಗೊಂಡಿರುವುದಕ್ಕೆ ಘಟನೋತ್ತರ ಅನುಮತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.20** | ದಿವಂಗತ ರೇವಣ್ಣ ಸಿ. ಪರಿಚಾರಕ, ಆಡಳಿತಾಧಿಕಾರಿಗಳ ಕಛೇರಿ, ಮಾ.ಗಂ, ಮೈಸೂರು ಅವರ ಮಗನಾದ ಶ್ರೀ ಯಶ್ವಂತ್‌ಕುಮಾರ್.ಆರ್ ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ |
| ತೀರ್ಮಾನ | ದಿವಂಗತ ರೇವಣ್ಣ ಸಿ. ಪರಿಚಾರಕ, ಆಡಳಿತಾಧಿಕಾರಿಗಳ ಕಛೇರಿ, ಮಾ.ಗಂ, ಮೈಸೂರು ಸೇವೆಯಲ್ಲಿದ್ದಾಗಲೇ ನಿಧನ ಹೊಂದಿರುವುದರಿಂದ ಮೃತ ಉದ್ಯೋಗಿಯ ಮಗನಾದ ಶ್ರೀ. ಯಶ್ವಂತ್‌ಕುಮಾರ್ ಆರ್. ಅವರಿಗೆ ಅನುಕಂಪದ ಆಧಾರದ ಮೇಲೆ ಅಧಿನಿಯಮಗಳನ್ವಯ ಪರಿಚಾರಕ ಹುದ್ದೆಯಲ್ಲಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2017/12.21** | ಪರೀಕ್ಷಾಕಾರ್ಯ ಚಟುವಟಿಕೆಗಳನ್ನು ಹೊರಗುತ್ತಿಗೆ ನೀಡಿರುವ ಬಗ್ಗೆ. |
| ತೀರ್ಮಾನ | ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸಲು ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. ಮತ್ತು ಕೆಲಸ ನಿರ್ವಹಿಸಿದ ಹಾಗೆ ವಿವಿಧ ಹಂತಗಳಲ್ಲಿ ಹುಂಡಿಗಳನ್ನು ಪಾವತಿಸುವ ಕ್ರಮವನ್ನು ಗಮನಿಸಿದ ಸಿಂಡಿಕೇಟ್ ಕಡೆಯ ಹಂತದ ಕಾರ್ಯವನ್ನು ಕೈಗೊಳ್ಳುವ ಮುನ್ನವೇ ಶೇ. 100ರಷ್ಟು ಹಣ ಪಾವತಿಸುವುದಕ್ಕೆ ಆಕ್ಷೇಪಣೆ ವ್ಯಕ್ತವಾದ ಹಿನ್ನೆಲೆಯಲ್ಲಿ ಕಡೆಯ ಹಂತದ ಕಾರ್ಯನಿರ್ವಹಿಸಿದ ನಂತರ ಶೇ. 10ರಷ್ಟು ಉಳಿಕೆ ಹಣವನ್ನು ಪಾವತಿಸುವಂತೆ ತೀರ್ಮಾನಿಸಿತು. ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ವಿಷಯದಲ್ಲಾದರೂ ಒಡಂಬಡಿಕೆ ಮಾಡಿಕೊಳ್ಳುವ ಮುನ್ನ ಕರಡು ಒಡಂಬಡಿಕೆಗೆ ಸಿಂಡಿಕೇಟ್ ಅನುಮೋದನೆ ಪಡೆಯಲು ನಿರ್ಧರಿಸಲಾಯಿತು. |
| **2017/12.22** | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಕ್ಕೆ ಸ್ವಂತಕಟ್ಟಡವನ್ನು ನಿರ್ಮಿಸುವ ಬಗೆಗೆ. |
| ತೀರ್ಮಾನ | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಕ್ಕೆ ಸ್ವಂತ ಕಟ್ಟಡವನ್ನು ನಿರ್ಮಿಸುವ ನಿಮಿತ್ತ ಸರ್ಕಾರ, ಸಾರ್ವಜನಿಕರು, ಸಂಘ-ಸಂಸ್ಥೆಗಳು ಮತ್ತು ದಾನಿಗಳಿಂದ ಪ್ರತ್ಯೇಕ ಖಾತೆಯನ್ನು ತೆರೆದು ಹಣಕಾಸು ಅಧಿಕಾರಿಗಳು ಖಾತೆಯನ್ನು ನಿರ್ವಹಿಸುವಂತೆ ಕ್ರಮಕೈಗೊಂಡು ಸಾರ್ವಜನಿಕ ವಲಯದಿಂದ ಸಂಗ್ರಹವಾಗಬೇಕಾದ ಹಣವನ್ನು ಆನ್‌ಲೈನ್/ಡಿಮ್ಯಾಂಡ್ ಡ್ರಾಫ್ಟ್/ಚೆಕ್ ಇನ್ನಿತರ ನಗದು ರಹಿತವಾಗಿ ವಂತಿಕೆ ಸಂಗ್ರಹಿಸಲು ಮತ್ತು ನೀಡುವ ವಂತಿಕೆಯನ್ನು ಪಡೆಯಲು ಸಿಂಡಿಕೇಟ್ ನಿರ್ಧರಿಸಿತು. |
| **2017/12.23** | ದೈಹಿಕ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದಂತೆ ಹೊಸ ಹುದ್ದೆಗಳಿಗೆ ಪರಿನಿಯಮಾವಳಿಯನ್ನು ರಚಿಸುವ ಬಗ್ಗೆ. |
| ತೀರ್ಮಾನ | ದೈಹಿಕ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಯಂತೆ ಅವಶ್ಯಕವಾಗಿರುವ ಹೊಸ ಹುದ್ದೆಗಳನ್ನು ಸೃಜಿಸಿ ಪರಿನಿಯಮಾವಳಿಯನ್ನು ರಚಿಸಲು ಹಾಗೂ ಸರ್ಕಾರದ ಅನುಮೋದನೆ ಪಡೆಯಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2017/12.24** | 2017–18ನೇ ಸಾಲಿನ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ರಾಜ್ಯಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯ ಬಗ್ಗೆ. |
| ತೀರ್ಮಾನ | 2017–18ನೇ ಸಾಲಿನ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ರಾಜ್ಯಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ ಅಂತರ್ಜಾಲದಲ್ಲಿರುವ ರಾಜ್ಯಶಾಸ್ತ್ರ ವಿಷಯದ Question Bankನಿಂದ ಯಥಾವತ್ತಾಗಿ 17 ಪ್ರಶ್ನೆಗಳನ್ನು ತೆಗೆದುಕೊಂಡು ಕರ್ತವ್ಯ ಲೋಪವೆಸಗಿರುವ ಪ್ರಾಧ್ಯಾಪಕರ ಹೆಸರನ್ನು ಕಪ್ಪುಪಟ್ಟಿಯಲ್ಲಿರಿಸಿ ಎಚ್ಚರಿಕೆ ನೋಟಿಸ್ ಜಾರಿಮಾಡಲು ಹಾಗೂ ರೂ. 10,000/–ಗಳ ದಂಡ ವಿಧಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.25** | ತಿದ್ದುಪಡಿ ಮಾಡಿರುವLifelong distinguished Professor ಅಧಿನಿಯಮವನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿರುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಹೊರೆಯಾಗದಂತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿರುವ ಶ್ರೇಷ್ಠ ನಿವೃತ್ತ ಪ್ರಾಧ್ಯಾಪಕರನ್ನು distinguished Professor ಆಹ್ವಾನಿಸಲು ರಚಿಸಲಾಗಿರುವ The University of Mysore (Creation of Post of Distinguished Professor) Statutes 2017 ಕರಡು ಅಧಿನಿಯಮವನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/12.26** | ಡಾ. ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣ ಕೇಂದ್ರಕ್ಕೆ ರೂ. 200.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ. |
| ತೀರ್ಮಾನ | ಡಾ. ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣ ಕೇಂದ್ರಕ್ಕೆ ಸರ್ಕಾರದಿಂದ ಒಂದು ಬಾರಿ ಕಾರ್ಪಸ್ ನಿಧಿಯಾಗಿ ರೂ. 200.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುವುದಕ್ಕೆ ಕೃತಜ್ಞತೆ ತಿಳಿಸಿದ ಸಭೆಯು ಸದರಿ ಮೊತ್ತವನ್ನು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿ ಹಣದಿಂದ ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳ ವೇತನ ಹಾಗೂ ಕೇಂದ್ರದ ಇತರ ಚಟುವಟಿಕೆಗಳಿಗೆ ವೆಚ್ಚಮಾಡುವ ಸಂಬಂಧ ಮಂಡಿಸಲಾಗಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. ಹಾಗೂ ಸದರಿ ಸಂಶೋಧನಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ನೀಡಿರುವ ಆದೇಶವನ್ನು ರದ್ದುಪಡಿಸಿ ಪ್ರಸ್ತಾವನೆಯಲ್ಲಿ ನಮೂದಿಸಿರುವ ಉದ್ಯೋಗಿಗಳಿಗೆ ಸರ್ಕಾರದಿಂದ ಅನುಮೋದನೆಗೊಂಡಿರುವಂತೆ ಕೂಡಲೇ ತಾತ್ಕಾಲಿಕವಾಗಿ ಸಂಚಿತ ವೇತನದ ಆಧಾರದ ಮೇಲೆ ಹೊಸ ಆದೇಶವನ್ನು ನೀಡಲು ಸಹ ತೀರ್ಮಾನಿಸಿತು. |
| **2017/12.27** | ಡಾ. ಪಿ.ಆರ್.ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಡಾ. ಪಿ.ಆರ್.ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯದಿನಾಂಕ 30–109–2017ರಂದು ಸಭೆ ಸೇರಿ ವಿಭಾಗದ ವಿಭಾಗೀಯ ಮಂಡಳಿಯು ಸಲ್ಲಿಸಿರುವ ಮೂರು ತಜ್ಞರ ಪಟ್ಟಿಯಲ್ಲಿನ ಈ ಕೆಳಕಂಡ ನಿವೃತ್ತ ಪ್ರಾಧ್ಯಾಪಕರನ್ನು ಆದ್ಯತಾನುಸಾರವಾಗಿ ನಿಯಮಾನುಸಾರ ಒಬ್ಬರನ್ನು ಒಂದು ವರ್ಷದ ಅವಧಿಗೆ ರೂ.20,000/–ಗಳ ಗೌರವಧನದೊಂದಿಗೆ ಡಾ. ಪಿ.ಆರ್.ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಭೆಯು ನಿರ್ಣಯಿಸಿತು. ಒಂದು ವೇಳೆ ಆದ್ಯತಾನುಸಾರ ನೇಮಕಗೊಂಡ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಪರಿಗಣಿಸದಿದ್ದ ಪಕ್ಷದಲ್ಲಿ ಮುಂದಿನ ಸರದಿಯಲ್ಲಿರುವ ಮತ್ತೊರ್ವ ತಜ್ಞರನ್ನು ಆಹ್ವಾನಿಸಲು ತೀರ್ಮಾನಿಸಿತು.<br><br>1. ಡಾ. ಹೆಚ್.ಎಸ್.ರಾಮಚಂದ್ರೇಗೌಡ<br>ನಿವೃತ್ತ ಜಾನಪದ ಪ್ರಾಧ್ಯಾಪಕರು<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |

| | |
|---|---|
| | 2. ಡಾ. ಪಿ.ಕೆ.ರಾಜಶೇಖರ<br>ಸಂಖ್ಯೆ 38, 23ನೇ ಕ್ರಾಸ್, 8ನೇ ಮುಖ್ಯ ರಸ್ತೆ<br>3ನೇ ಹಂತ 'ಇ' ಬ್ಲಾಕ್<br>ವಿಜಯನಗರ, ಮೈಸೂರು<br>3. ಡಾ. ಆರ್.ವಿ.ಎಸ್.ಸುಂದರಂ<br>ನಿವೃತ್ತ ದಕ್ಷಿಣ ಭಾರತೀಯ ಅಧ್ಯಯನ ಪ್ರಾಧ್ಯಾಪಕರು<br>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ<br>ಮಾನಸಗಂಗೋತ್ರಿ, ಮೈಸೂರು |
| **2017/12.28** | ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸುವ ಬಗ್ಗೆ. |
| **ತೀರ್ಮಾನ** | ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸುವ ಸಂಬಂಧ ದಿನಾಂಕ 24-02-2014ರಂದು ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರು ಅವರೊಂದಿಗೆ ಐದು ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಬಾರಿಗೆ ಅಗತ್ಯವಿರುವಷ್ಟು ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಸದರಿಯವರಿಂದಲೇ ಖರೀದಿಸಿ ನಿಯಮಾಗಳನುಸಾರ ಕರಾರನ್ನು ರದ್ದುಗೊಳಿಸಿ ಅನಂತರ ಮುಂಬರುವ ಮೇ/ಜೂನ್ ಪರೀಕ್ಷೆಗಳಿಗೆ ಸರ್ಕಾರದ ನಿರ್ದೇಶನದಂತೆ ಮೈಸೂರು ಸೇಲ್ಸ್ಇಂಟರ್ ನ್ಯಾಷನಲ್ ಲಿಮಿಟೆಡ್ (MSIL)ರವರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಸ್ನಾತಕ ಮತ್ತು ಸ್ನಾತಕೋತ್ತರ ಎಲ್ಲಾ ಪದವಿ ಪರೀಕ್ಷೆಗಳಿಗೆ ಅವಶ್ಯಕವಿರುವ ಖಾಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.29** | Institutions of Eminence ಯೋಜನೆಯಡಿಅರ್ಜಿ ಸಲ್ಲಿಸಲು 1.00 ಕೋಟಿ ರೂ.ಗಳನ್ನು RTGS/NEFT ಮೂಲಕ ಪಾವತಿಸಲು ನೀಡಲಾಗಿರುವ ಆದೇಶಕ್ಕೆ ಅನುಸಮರ್ಥನೆ ಕೋರಿರುವ ಬಗ್ಗೆ. |
| **ತೀರ್ಮಾನ** | ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದInstitutions of Eminence ಯೋಜನೆಯಡಿ ಅರ್ಜಿ ಪ್ರಕ್ರಿಯೆ ಶುಲ್ಕ 1.00 ಕೋಟಿ ರೂ.ಗಳನ್ನು RTGS/NEFT ಮೂಲಕ ಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2017/12.30** | ಮಾನಸಗಂಗೋತ್ರಿಯಲ್ಲಿರುವ ಮಾನವಿಕ ವಿಭಾಗದ ಮುಂದೆ ಶ್ರೀ ಕನಕದಾಸರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಕೋರಿರುವ ಬಗ್ಗೆ. |
| **ತೀರ್ಮಾನ** | ಮಾನಸಗಂಗೋತ್ರಿಯಲ್ಲಿರುವ ಮಾನವಿಕ ವಿಭಾಗದ ಮುಂದೆ ಶ್ರೀ ಕನಕದಾಸರ ಪ್ರತಿಮೆಯನ್ನು ಸ್ಥಾಪಿಸುವ ಸಂಬಂಧ ಸರ್ಕಾರದ ಅನುಮೋದನೆ ಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.31** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಗೆ ಉತ್ತಮ ಶಿಕ್ಷಣ ಪ್ರಶಸ್ತಿಯನ್ನು ಪ್ರದಾನ ಮಾಡುವ ಸಂಬಂಧ ಸದಸ್ಯರ ಸಮಿತಿಯನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಸಂಯೋಜಿತ ಕಾಲೇಜುಗಳ ಎಲ್ಲಾ ವಿಷಯಗಳ ಬೋಧಕ ವರ್ಗದವರನ್ನು ಉತ್ತೇಜಿಸುವ ಸಲುವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಅವಿರತವಾಗಿ ದುಡಿದು ಬೋಧನೆ, ಸಂಶೋಧನೆ, ಇನ್ನಿತರೆ ಶೈಕ್ಷಣಿಕ ವಿಷಯಗಳಲ್ಲಿ ಶ್ರೇಷ್ಠರಾಗಿರುವವರನ್ನು ಪ್ರತಿ ವರ್ಷ ಶಿಕ್ಷಕ ದಿನಾಚರಣೆಯಂದು ಈ ಕೆಳಕಂಡಂತೆ **"ಉತ್ತಮ ಶಿಕ್ಷಕ ಪ್ರಶಸ್ತಿ"**ಯನ್ನು ಪ್ರದಾನಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |

| ಕ್ರ. ಸಂ. | ನಿಕಾಯಗಳು | ಸಂಖ್ಯೆ |
|---|---|---|
| 01. | ವಿಜ್ಞಾನ ಮತ್ತು ತಂತ್ರಜ್ಞಾನ | 02 |
| 02. | ಸಾಮಾಜಿಕ ವಿಜ್ಞಾನ | 02 |
| 03. | ಶಿಕ್ಷಣ, ಕಾನೂನು, ವಾಣಿಜ್ಯ ಮತ್ತು ಆಡಳಿತ ವಿಜ್ಞಾನ | 01 |
| 04. | ಮೇಲಿನ ಎಲ್ಲಾ ನಿಕಾಯಗಳನ್ನೊಳಗೊಂಡಂತೆ ಎಲ್ಲಾ ಸಂಯೋಜಿತ ಕಾಲೇಜುಗಳ ಅಧ್ಯಾಪಕರುಗಳಿಗೆ | 03 |

| | |
|---|---|
| | ಮುಂದುವರೆದು, "ಉತ್ತಮ ಶಿಕ್ಷಕ ಪ್ರಶಸ್ತಿ"ಯನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ, ಮಾರ್ಗಸೂಚಿಯನ್ನು ಸಿದ್ಧಪಡಿಸಲು ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.32** | ಶ್ರೀ ಎಸ್.ಎ.ಉಮೇಶ್, ಸಹಾಯಕ ಅಭಿಯಂತರರು, ಇವರ ಹುದ್ದೆಯನ್ನು ದಿನಾಂಕ 01-08-2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| **2017/12.33** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂತ ಕನಕದಾಸ ಹಾಗೂ ಮಹರ್ಷಿ ವಾಲ್ಮೀಕಿ ಪೀಠವನ್ನು ಸ್ಥಾಪಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂತ ಕನಕದಾಸ ಹಾಗೂ ಮಹರ್ಷಿ ವಾಲ್ಮೀಕಿ ಪೀಠವನ್ನು ಸ್ಥಾಪಿಸುವ ಸಂಬಂಧ ಸರ್ಕಾರದ ಅನುದಾನ ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸಂಬಂಧಪಟ್ಟ ಅಧ್ಯಯನ ವಿಭಾಗಗಳಿಂದ ಪಡೆದು ಸರ್ಕಾರದ ಅನುಮೋದನೆ ಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/12.34** | ಅಭಿವೃದ್ಧಿಅಧ್ಯಯನ ಸಂಸ್ಥೆಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ. |
| ತೀರ್ಮಾನ | ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾರು ಇಲ್ಲದಿರುವುದರಿಂದ ನಿರ್ದೇಶಕರ ಹುದ್ದೆಯನ್ನು ಅಂದಿನ ಕಲಾ ನಿಕಾಯದ ಡೀನರಾಗಿದ್ದ ಪ್ರೊ. ದಯಾನಂದ ಮಾನೆ ಅವರನ್ನು ವಿಭಾಗದ ನಿರ್ದೇಶಕರನ್ನಾಗಿ ನಿಯೋಜಿಸಲಾಗಿದ್ದು ತದನಂತರದಲ್ಲಿ ಕಲಾ ನಿಕಾಯದ ಡೀನರಾದ ಪ್ರೊ. ಎಸ್. ಉಷಾರಾಣಿಯವರು ಈಗಾಗಲೇ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ಅಧ್ಯಕ್ಷರಾಗಿರುವುದರಿಂದ ಹೆಚ್ಚುವರಿಯಾಗಿ ನಿರ್ದೇಶಕ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಕೆಳಗಿನವರನ್ನು ಆದ್ಯತಾನುಸಾರ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಲು ಸಿಂಡಿಕೇಟ್ ತೀರ್ಮಾನಿಸಿತು.<br><br>1. ಪ್ರೊ. ಹೆಚ್.ನಾಗರಾಜ್,<br>ಭೂಗೋಳಶಾಸ್ತ್ರ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು<br>2. **ಪ್ರೊ. ಮಹೇಂದ್ರಕುಮಾರ್**<br>ಅರ್ಥಶಾಸ್ತ್ರ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| **2017/12.35** | ಮೆ॥ ಮೆಟಾ-ಐ ಟೆಕ್ನಾಲಜೀಸ್, ಪ್ರೈ., ಲಿ., ಬೆಂಗಳೂರು ಇವರ ಹುಂಡಿಗಳನ್ನು ಪಾವತಿಸುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| **2017/12.36** | ಕೇಂದ್ರ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳನ್ನು ಉಪ ಸಮಿತಿಯು ಪರಿಶೀಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ. |
| ತೀರ್ಮಾನ | ಕೇಂದ್ರ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳನ್ನು ಪರಿಶೀಲಿಸಿ ರಚಿಸಲಾಗಿದ್ದ ಉಪ ಸಮಿತಿಯು ಅನುಪಾಲನಾ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2017/12.37** | ಕು॥ ನಿರ್ಮಲ.ಎನ್, ಶೀಘ್ರಲಿಪಿಗಾರರು, ಇವರಿಗೆ ದಿನಾಂಕ 01-08-2006ರಿಂದ ಜಾರಿಗೆ ಬಂದಂತೆ ಬೆರಳಚ್ಚುಗಾರರು & ಗುಮಾಸ್ತ ಹುದ್ದೆಯಿಂದ ಶೀಘ್ರಲಿಪಿಗಾರರಾಗಿ ಹುದ್ದೆಗೆ ಮಾರ್ಪಡಿಸಿರುವ ಬಗ್ಗೆ. |
| ತೀರ್ಮಾನ | ಕುಲಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಿಂಡಿಕೇಟ್ ಉಪಸಮಿತಿ ಸಭೆಯ ನಡಾವಳಿಯಲ್ಲಿ ಸೂಚಿಸಿರುವಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |

ಇತರೆ ವಿಷಯಗಳು:

1) ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ, ಅಧ್ಯಯನ ಮಂಡಳಿಗಳಲ್ಲಿ ಪ್ರಾಧ್ಯಾಪಕರಿದ್ದರೂ ಅಂತಹವರುಗಳನ್ನು ಕಡೆಗಣಿಸಿ ಕಿರಿಯರನ್ನು ನೇಮಿಸಲಾಗಿದೆ. ಅಂತಹ ಅಧ್ಯಯನ ಮಂಡಳಿಗಳನ್ನು ಪರಿಷ್ಕರಿಸಲು ಮತ್ತು
2) ಈ ಹಿಂದೆ ಸದಸ್ಯರಾಗಿದ್ದ ಶ್ರೀ ಅರುಣ್‌ಕುಮಾರ್‌ರವರನ್ನು ಅಧ್ಯಯನ ವಿಭಾಗಗಳಿಗೆ ಭೇಟಿ ನೀಡಿ ವರದಿ ನೀಡಲು ನೇಮಿಸಲಾಗಿತ್ತು. ಆದ್ದರಿಂದ ಸದರಿ ಸಮಿತಿಗೆ ಅವರ ಬದಲಿಗೆ ಮತ್ತೊಬ್ಬ ಸದಸ್ಯರನ್ನು ಸೇರ್ಪಡೆ ಮಾಡಬೇಕಾಗಿದ್ದು ಅದನ್ನೂ ಸಹ ಸರಿಪಡಿಸಿ ಆದೇಶ ನೀಡಲು ಶ್ರೀ ಎಂ.ಎಸ್.ಎಸ್.ಕುಮಾರ್‌ರವರು ಸಭೆಯನ್ನು ಕೋರಿದರು.

ಅಂತಹ ಯಾವುದಾದರೂ ಸಮಿತಿಗಳ ಕಡತಗಳಿದ್ದಲ್ಲಿ ಕೂಡಲೇ ಅವುಗಳೆಲ್ಲವನ್ನೂ ಮಂಡಿಸಲು ಕ್ರಮಕೈಗೊಳ್ಳುವಂತೆಯೂ ಮತ್ತು ಹಿರಿಯ ಪ್ರಾಧ್ಯಾಪಕರ ಹೆಸರನ್ನು ಸೇರಿಸಿ ಪರಿಷ್ಕೃತ ಆದೇಶ ಹೊರಡಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

3) CPDPS, CIST, ಮತ್ತಿತರ ವಿಭಾಗಗಳಲ್ಲಿ ದೀರ್ಘಾವಧಿಯವರೆಗೆ ಮುಖ್ಯಸ್ಥರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಬದಲಾವಣೆ ಮಾಡಿಸೂಕ್ತರಾದವರನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

ಅಂತಿಮವಾಗಿ, ಮಾನ್ಯ ಕುಲಪತಿಗಳು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/- | ಸಹಿ/- |
| **ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿ ಮತ್ತು ಅಧ್ಯಕ್ಷರು** |